

ಬಿಹಾರದ ಮೈಥಿಲಿ ಠಾಕೂರ್ ಹಾಗೂ ಆಕೆಯ ಸಹೋದರರ ಸಂಗೀತ ಕಛೇರಿಗಳು ನಾದಪ್ರಿಯರ ಪಾಲಿನ ಹಬ್ಬ. ಈ ಎಳೆಯ ಸಂಗೀತಗಾರರ ಹಾಡುಗಾರಿಕೆ ಯೂಟ್ಯೂಬ್‌ನಲ್ಲಿ ಸೆನ್ಸೇಷನ್.

■ ವಿಶಾಖ ಎನ್.

# ಸಂಗೀತ ಕುಣಿಸುವ ಬಿಹಾರಿ 'ಪ್ಯಾರಿ'

ಮುಖದ ಮೇಲೆ ಹಾಡು ಕುಣಿಸಬಲ್ಲ ಹುಡುಗಿ ಮೈಥಿಲಿ ಠಾಕೂರ್. ಬೆರಳುಗಳು ಹಾರ್ಮೋನಿಯಂ ಕೀಲಿಗಳಲ್ಲಿ ನಾದವನ್ನು ಸದಾ ಹುಡುಕುತ್ತಿರುತ್ತವೆ. ತಲೆಯನ್ನು ಅತ್ತಿಂದಿತ್ತ ಇತ್ತಿಂದತ್ತ ಆಡಿಸುತ್ತಾ ಅವಳು ಗಾಳಿಯನ್ನೂ ಸಂಗೀತದ ಅಭಿಮಾನಿಯಾಗಿಸಿಕೊಳ್ಳುವ ಪರಿಗೆ ತಲೆದೂಗುತ್ತಿರುವ ಅಭಿಮಾನಿ ವೃಂದ ದೊಡ್ಡದು. ಹುಡುಗಿಯ ಮುಖದ ಮೇಲಿನ ರುಜುವಿನಂತೆ ನಿರ್ಮಲ ನಗೆಯೊಂದು ಕಾಣುತ್ತದೆ.

ಯೂಟ್ಯೂಬ್ ಸೆನ್ಸೇಷನ್ ಹುಡುಗಿ ಮೈಥಿಲಿ. ಅಣ್ಣ ರಿಷಭ್ ಠಾಕೂರ್ ತಬಲದಲ್ಲಿ ಸಂಗೀತ ಸರಸ್ವತಿಯನ್ನು ಒಲಿಸಿಕೊಂಡರೆ, ತಮ್ಮ ಅಯಾಚಿ ಠಾಕೂರ್ ತಾಳವೆನ್ನುವಂತೆ ಚಪ್ಪಾಳೆ ಸದ್ದು ಹೊಮ್ಮಿಸುತ್ತಾ ಅಕ್ಕನಿಗೆ ಹಾಡುಗಾರಿಕೆಯಲ್ಲಿ ಸಾಥ್ ನೀಡುತ್ತಾನೆ.

ಮೈಥಿಲಿ ಬಿಹಾರದ ಮಧುಬನಿಯ ಬೇನಿಪಟ್ಟಿ ಎಂಬಲ್ಲಿ ಹುಟ್ಟಿದವಳು. ಇನ್ನೆರಡು ತಿಂಗಳು ಕಳೆದರೆ ವಯಸ್ಸು ಹತ್ತೊಂಬತ್ತು ದಾಟುತ್ತದೆ. ಯೂಟ್ಯೂಬ್‌ನಲ್ಲಿ ರಿಷಭ್ ಠಾಕೂರ್ ಹೆಸರಿನ ಚಾನೆಲ್‌ನಲ್ಲಿ ಈಕೆಯ ಹಾಡುಗಾರಿಕೆ ಈಗ ಜನಮನ ಗೆಲ್ಲುತ್ತಿದೆ. ಪ್ರತಿ ಹಾಡನ್ನೂ ಲಕ್ಷಾಂತರ ಜನರು ವೀಕ್ಷಿಸುತ್ತಿದ್ದಾರೆ. ಅಷ್ಟೇ ಅಲ್ಲ, ತನ್ನದೇ ಹೆಸರಿನ ವೆಬ್‌ಸೈಟ್ ರೂಪಿಸಿಕೊಂಡಿರುವ ಮೈಥಿಲಿ ಅದರ ಮೂಲಕವೇ ವೇದಿಕೆ ಕಾರ್ಯಕ್ರಮಗಳಿಗೆ ಡೇಟ್‌ಗಳನ್ನು ಬುಕ್ ಮಾಡಿಕೊಳ್ಳುತ್ತಿರುವುದು ವಿಶೇಷ. ಇದುವರೆಗೆ 500ಕ್ಕೂ ಹೆಚ್ಚು ವೇದಿಕೆ ಕಾರ್ಯಕ್ರಮಗಳನ್ನು ನೀಡಿರುವ ಮೈಥಿಲಿಗೆ ಸಂಗೀತ ಬಾಲ್ಯಸ್ನೇಹಿತ.

ಮಾತಿನ ಜತೆಜತೆಗೇ ಹಾಡನ್ನೂ ಕಲಿತ ಭಾಗ್ಯವಂತೆ ಮೈಥಿಲಿ. ಮನೆಯಲ್ಲಿದ್ದ ತಾತ ಹನುಮ, ರಾಮನ ಪರಮ ಭಕ್ತ. ದೇವರಿಗೆ ಕೈಮುಗಿಯುತ್ತಾ ನಿಂತರೆ ಲೀಲಾಜಾಲವಾಗಿ ಭಜನೆಗಳನ್ನು ಹಾಡುತ್ತಿದ್ದರು. ತಾತನ ಜತೆಗೇ ಸಹಜವಾಗಿ ಕೂಡುತ್ತಿತ್ತು ಮೊಮ್ಮಗಳ ದನಿ. ಕಣ್ಣ ಇಶಾರೆಯಲ್ಲಿಯೇ ಶ್ರುತಿ ತಿದ್ದುತ್ತಿದ್ದ ಆ ತಾತನೇ ಮೈಥಿಲಿಯ ಮೊದಲ ಗುರು. 'ನನಗೆ ಎಷ್ಟನೇ ವಯಸ್ಸಿನಲ್ಲಿ ಹಾಡಲು ಬಂತು ಎಂದೇ ನೆನಪಿಲ್ಲ. ಮೂರ್ನಾಲ್ಕು ವರ್ಷದವಳಾಗುವ ಹೊತ್ತಿಗೆ ಸ್ಪಷ್ಟವಾಗಿ ಹಾಡುತ್ತಿದ್ದೆ ಅಂತ ಅಪ್ಪ–ಅಮ್ಮ ಹೇಳುತ್ತಿರುತ್ತಾರೆ' ಎನ್ನುತ್ತಾಳೆ ಮೈಥಿಲಿ.

ಐದನೇ ಇಯತ್ತೆಯವರೆಗೆ ಮೈಥಿಲಿಗೆ ಮನೆಯಲ್ಲೇ ಪಾಠವಾಗುತ್ತಿತ್ತು. ಶಾಲೆ ದೂರ ಇದ್ದುದರಿಂದ ಮೇಷ್ಟರೇ ಬಂದು ಪಾಠ ಕಲಿಸಿ ಹೋಗುತ್ತಿದ್ದರು. ಹೀಗಾಗಿ ಅಕ್ಷರಾಭ್ಯಾಸಕ್ಕಿಂತ ಸಂಗೀತಾಭ್ಯಾಸವೇ ಹೆಚ್ಚಾಗಿ ನಡೆಯುತ್ತಿತ್ತು. ಆಮೇಲೆ ಮಕ್ಕಳ ಶಿಕ್ಷಣದ ಸಲುವಾಗಿಯೇ ಇಡೀ ಕುಟುಂಬ ದೆಹಲಿಗೆ ಸ್ಥಳಾಂತರಗೊಂಡಿತು. ತಂದೆ ರಮೇಶ್ ಠಾಕೂರ್ ಖುದ್ದು ಸಂಗೀತದ ಮೇಷ್ಟರು. ದೆಹಲಿಯಲ್ಲಿ ಸಂಗೀತ ಪಾಠ ಹೇಳಿಕೊಂಡೇ ಅವರು ತುತ್ತಿನ ಚೀಲ ತುಂಬಿಸಿಕೊಳ್ಳಬೇಕಿತ್ತು. ಅಮ್ಮ ಭಾರತಿ ಮನೆವಾರ್ತೆ, ಮಕ್ಕಳ ಲಾಲನೆ–ಪಾಲನೆ ಹಚ್ಚಿಕೊಂಡಿದ್ದವರು. ಅಪ್ಪನ ಹಾಡುಗಾರಿಕೆ, ಹಾರ್ಮೋನಿಯಂ ನುಡಿಸಾಣಿ ಮಗಳಿಗೂ ರಕ್ತಗತವಾಗಿ ಬಂತೆನ್ನಬೇಕು. ಮಗಳ ಸಂಗೀತಾಸಕ್ತಿಯನ್ನು ಸೂಕ್ಷ್ಮವಾಗಿ ಗಮನಿಸಿದ ರಮೇಶ್, ನಿರಂತರವಾಗಿ ಕಲಿಕೆಯ ಗೊಬ್ಬರ ಪೂರೈಸುತ್ತಾ ಬಂದರು.

ರಿಯಾಲಿಟಿ ಶೋಗಳ ಭರಾಟೆ ಹೆಚ್ಚಾದಂತೆ ಈ ಹುಡುಗಿಯೂ ಅದರತ್ತ ಆಕರ್ಷಿತಳಾದಳು. 'ಸರಿಗಮಪ ಲಿಟ್ಲ್ ಚಾಂಪ್ಸ್' ಆಡಿಷನ್‌ಗೆ ಹೋದಾಗ ಮೊದಲ ಕಹಿ ಅನುಭವ. ಆಯ್ಕೆಯಾಗಲಿಲ್ಲ. ಹಾಗೆಂದು ಮೈಥಿಲಿ ಸುಮ್ಮನಾಗಲಿಲ್ಲ. ಇನ್ನೂ ಐದಾರು ರಿಯಾಲಿಟಿ ಶೋಗಳಲ್ಲಿ ಸ್ಪರ್ಧಿಸಿದಳು. ಒಂದೊಂದರಲ್ಲಿ ಒಂದೊಂದು ಹಂತದಲ್ಲಿ ಹೊರಗೆ ಬರಬೇಕಾಯಿತು. ಅದನ್ನೇ ಅನುಭವದ್ರವ್ಯವಾಗಿಸಿಕೊಂಡ ಅವಳು 2017ರಲ್ಲಿ ಕಲರ್ಸ್ ಸೂಪರ್ ಹಿಂದಿ ಚಾನೆಲ್‌ನ 'ರೈಸಿಂಗ್ ಸ್ಟಾರ್' ಮೊದಲ ಆವೃತ್ತಿಗೆ ಆಯ್ಕೆಯಾದಳು. ಆಡಿಷನ್‌ನಲ್ಲಿ ಅವಳ ಹಾಡು–ಹಾರ್ಮೋನಿಯಂಗೆ ಅಣ್ಣ–ತಮ್ಮಂದಿರ ಸಾಥ್ ಇತ್ತು. ತೀರ್ಪುಗಾರರು ಚೀಟಿಯೊಂದರಲ್ಲಿ '10' ಎಂದು ಬರೆದುಕೊಂಡರು. ಅದನ್ನು ಗಮನಿಸಿದ ಮೈಥಿಲಿಗೆ ಹಾಗೆಂದರೆ ಏನು ಅರ್ಥ ಎಂದು ಕೇಳಬೇಕು ಎನಿಸಿತಾದರೂ ಕೇಳುವ ಧೈರ್ಯ ಬರಲಿಲ್ಲ. ರಿಯಾಲಿಟಿ ಶೋನಲ್ಲಿ ರನ್ನರ್ ಅಪ್ ಆದಮೇಲೆ ಆ ಗುರು, 'ನೀನು ಟಾಪ್ 10ರಲ್ಲಿ ಒಬ್ಬಳಾಗುವೆ' ಎಂದು ನಾನು ಆ ದಿನ ಬರೆದ ಭವಿಷ್ಯ ಅದು ಎಂದಿದ್ದರು.

'ಮೈ ರೋವಾ ತೆನು ಯಾದ್ ಕರ್ ಕೆ...', 'ಇಷ್ಕ್ ಕಾ ಹಾಫಿಜ್', 'ದಗಾ ಬಾಜ್ ರೇ', 'ಮೇರೆ ಢೋಲ್ನಾ ಸುನ್', 'ತುಮ್ಹೆ ದಿಲ್ಲಗಿ ಭೂಲ್ ಜಾನಿ ಪಡೇಗಿ', 'ತುಮ್ಸೆ ಮಿಲ್ಕೆದಿಲ್ ಕಾ ಹೈ ಜೋ ಹಾಲ್' ಇವೆಲ್ಲವೂ ಮಿಥಾಲಿ ಹಾಗೂ ಸಹೋದರರು ಯೂಟ್ಯೂಬ್‌ನಲ್ಲಿ ಮೋಡಿ ಮಾಡಿರುವ ಹಾಡುಗಳು. ಒಂದೊಂದು ವಿಡಿಯೊವನ್ನೂ ಲಕ್ಷಾಂತರ ಜನ ವೀಕ್ಷಿಸಿದ್ದಾರೆ. ಎಲ್ಲವುಗಳಲ್ಲೂ ಭಜನೆಯ ಲಯವಿದೆ. ಹಿಂದೂಸ್ತಾನಿ ರಾಗಗಳ ಕಸುಬುದಾರಿಕೆ ಇದೆ. ಕೆಲವರು ತಮ್ಮ ಮನೆಯ ಕಾರ್ಯಕ್ರಮಗಳಿಗೆ ಬಂದು ಹಾಡುವಂತೆ ಆಹ್ವಾನಿಸುವ ಮಟ್ಟಕ್ಕೆ ಅಭಿಮಾನಿಗಳಾಗಿರುವುದು ಹೆಗ್ಗಳಿಕೆ.

'ಅರಿಜಿತ್ ಸಿಂಗ್ ಜತೆಗೆ ಹಾಡುವಾಸೆ' ಎನ್ನುವ ಮೈಥಿಲಿ ಒಂದು ಅಲ್ಬಂಗೆ ದನಿಯಾದ ಅನುಭವವನ್ನೂ ಪಡೆದಿದ್ದಾಳೆ. ಮಾತುಮಾತಿಗೂ ಹಾಡುವಾಗಲೂ ಅವಳು ತುಳುಕಿಸುವ ಸ್ನಿಗ್ಧ ನಗು ಮಾತ್ರ ಬಣ್ಣಿಸಲಸದಳ. ■